**A**

**CCE RR/PR/PF/NSR/NSPR**
**FULL SYLLABUS**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಆಗಸ್ಟ್ 2024 ರ ಪರೀಕ್ಷೆ - 3**

**AUGUST 2024 EXAMINATION - 3**

## ಮಾದರಿ ಉತ್ತರಗಳು

## MODEL ANSWERS

**ಸಂಕೇತ ಸಂಖ್ಯೆ : 85-K** **CODE NO. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

**ದಿನಾಂಕ : 06. 08. 2024 ]** **[ ಗರಿಷ್ಠ ಅಂಕಗಳು : 80**

**Date : 06. 08. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : 8 × 1 = 8** | |
| 1. | ಕೇಂದ್ರದಲ್ಲಿ 'ದ್ವಿಸರ್ಕಾರ'ವನ್ನು ಸ್ಥಾಪಿಸಲು ಅವಕಾಶ ಮಾಡಿದ ಕಾಯ್ದೆ<br>(A) 1773 ರ ರೆಗ್ಯುಲೇಟಿಂಗ್ ಕಾಯ್ದೆ<br>(B) 1909 ರ ಭಾರತೀಯ ಪರಿಷತ್ ಕಾಯ್ದೆ<br>(C) 1919 ರ ಭಾರತ ಸರ್ಕಾರ ಕಾಯ್ದೆ<br>(D) 1935 ರ ಭಾರತ ಸರ್ಕಾರ ಕಾಯ್ದೆ<br>*ಉತ್ತರ :* (D) 1935 ರ ಭಾರತ ಸರ್ಕಾರ ಕಾಯ್ದೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಇವುಗಳಲ್ಲಿ ಉಳಿದವುಗಳಿಗಿಂತ ಭಿನ್ನವಾಗಿರುವುದು<br>(A) ಆಕ್ಸೀಸ್ ( Axis )<br>(B) ಕದನ ಬಾಂಧವ್ಯತ್ರಯ ( Triple Entente )<br>(C) ಕದನ ಸೌಹಾರ್ದತ್ರಯ ( Triple Alliance )<br>(D) ಬೂದು ಅಂಗಿದಳ ( Brown Shirts )<br>***ಉತ್ತರ :*** (D) ಬೂದು ಅಂಗಿದಳ ( Brown Shirts ) | 1 |
| 3. | ವಿಶ್ವಸಂಸ್ಥೆಯ ಪ್ರಧಾನ ಕಛೇರಿ ಇರುವ ನಗರ<br>(A) ಪ್ಯಾರಿಸ್ (B) ವಾಷಿಂಗ್‌ಟನ್ ಡಿ.ಸಿ.<br>(C) ನ್ಯೂಯಾರ್ಕ್ (D) ರೋಮ್<br>***ಉತ್ತರ :*** (C) ನ್ಯೂಯಾರ್ಕ್ | 1 |
| 4. | ಸ್ವ-ಸಹಾಯ ಸಮೂಹಗಳ ರಚನೆಯ ಉದ್ದೇಶ<br>(A) ನಗರಾಭಿವೃದ್ಧಿ (B) ಮಹಿಳಾ ಸಬಲೀಕರಣ<br>(C) ಕೈಗಾರಿಕೀಕರಣ (D) ವಿದೇಶಿ ವ್ಯಾಪಾರಕ್ಕೆ ಉತ್ತೇಜನ<br>***ಉತ್ತರ :*** (B) ಮಹಿಳಾ ಸಬಲೀಕರಣ | 1 |
| 5. | ಭಾರತದಲ್ಲಿಯೇ ಅತ್ಯಂತ ಎತ್ತರವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ<br>(A) ಭಾಕ್ರಾ-ನಂಗಲ್ ಯೋಜನೆ (B) ಕೋಸಿ ಯೋಜನೆ<br>(C) ದಾಮೋದರ ನದಿಕಣಿವೆ ಯೋಜನೆ (D) ತುಂಗಭದ್ರಾ ಯೋಜನೆ<br>***ಉತ್ತರ :*** (A) ಭಾಕ್ರಾ-ನಂಗಲ್ ಯೋಜನೆ | 1 |
| 6. | ಭಾರತದಿಂದ ಅಭ್ರಕದ ರಫ್ತು ಪ್ರಮಾಣ ಕಡಿಮೆಯಾಗುತ್ತಿರಲು ಕಾರಣ<br>(A) ಅಭ್ರಕದ ನಿಕ್ಷೇಪಗಳು ಖಾಲಿಯಾಗುತ್ತಿವೆ<br>(B) ಚೀನಾ ಅತ್ಯಂತ ಹೆಚ್ಚು ಅಭ್ರಕ ತಯಾರಿಸುತ್ತಿದೆ<br>(C) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ<br>(D) ಅಭ್ರಕದ ಬೆಲೆ ದುಬಾರಿಯಾಗುತ್ತಿದೆ<br>***ಉತ್ತರ :*** (C) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ | 1 |
| 7. | ಭಾರತದ ಹಸಿರು ಕ್ರಾಂತಿಯ ಪಿತಾಮಹ<br>(A) ವರ್ಗೀಸ್ ಕುರಿಯನ್ (B) ಡಾ. ನಾರ್ಮನ್ ಬೋರ್ಲಾಗ್<br>(C) ಹಾಜಿ ಖಲೀಮುಲ್ಲಾಖಾನ್ (D) ಡಾ. ಎಂ.ಎಸ್. ಸ್ವಾಮಿನಾಥನ್<br>***ಉತ್ತರ :*** (D) ಡಾ. ಎಂ.ಎಸ್. ಸ್ವಾಮಿನಾಥನ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಗಿರೀಶನು ಖರೀದಿಯಲ್ಲಿ ತನಗಾದ ಅನ್ಯಾಯದ ವಿರುದ್ಧ ರಾಜ್ಯ ಗ್ರಾಹಕ ಆಯೋಗಕ್ಕೆ ದೂರು ಸಲ್ಲಿಸಿರುವನು. ಅವನಿಗಾದ ಅನ್ಯಾಯದ ಮೌಲ್ಯವು<br>(A) ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು<br>(B) ಇಪ್ಪತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿಗಳು<br>(C) ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ<br>(D) ಹತ್ತು ಲಕ್ಷದಿಂದ ಇಪ್ಪತ್ತು ಲಕ್ಷ ರೂಪಾಯಿಗಳು<br>***ಉತ್ತರ :*** (B) ಇಪ್ಪತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿಗಳು | 1 |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು : 8 × 1 = 8** | |
| 9. | ಪ್ರಥಮ ಆಂಗ್ಲೋ-ಮರಾಠ ಯುದ್ಧದ ಕೊನೆಯಲ್ಲಿ ಸಹಿ ಹಾಕಲಾದ ಒಪ್ಪಂದ ಯಾವುದು ?<br>***ಉತ್ತರ :***<br>ಸಾಲ್ಬಾಯ್ ಒಪ್ಪಂದ | 1 |
| 10. | 1953 ರಲ್ಲಿ ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿನ ಆಯೋಗವು ಏಕೆ ರಚನೆಯಾಯಿತು ?<br>***ಉತ್ತರ :***<br>ರಾಜ್ಯಗಳನ್ನು ಪುನರ್ವಿಂಗಡಿಸಲು | 1 |
| 11. | ನಿಶ್ಶಸ್ತ್ರೀಕರಣ ಎಂದರೇನು ?<br>***ಉತ್ತರ :***<br>ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ನೇರ ಪ್ರಕ್ರಿಯೆ. | 1 |
| 12. | ಮೌನ ಕಣಿವೆ ಆಂದೋಲನವನ್ನು ಏಕೆ ಹಮ್ಮಿಕೊಳ್ಳಲಾಯಿತು ?<br>***ಉತ್ತರ :***<br>— ಪರಿಸರ ನಾಶ ತಡೆಗಟ್ಟುವುದು<br>— ಜೀವ ಮತ್ತು ಸಸ್ಯಸಂಕುಲ ಸಂರಕ್ಷಣೆ | 1 |
| 13. | 'ಶಿಕ್ಷಣದ ಹಕ್ಕು ಕಾಯ್ದೆ 2009' ನ್ನು ಏಕೆ ಜಾರಿಗೆ ತರಲಾಯಿತು ?<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು<br>— ಖಾಸಗಿ ಶಾಲೆಗಳಲ್ಲಿ ಶೇ. 25 ರಷ್ಟು ಸೀಟುಗಳನ್ನು ಅಗತ್ಯವುಳ್ಳ ಮಕ್ಕಳಿಗೆ ಮೀಸಲಿಡುವುದು | 1 |
| 14. | ಸಾಂದ್ರ ಬೇಸಾಯದ ಉಪಯೋಗವೇನು ?<br>***ಉತ್ತರ :***<br>— ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರದಲ್ಲಿ 2-3 ಬೆಳೆ ಬೆಳೆಯುವುದು<br>— ಅಧಿಕ ಜನಸಂಖ್ಯೆ ಉಳ್ಳ ಮತ್ತು ಫಲವತ್ತಾದ ಪ್ರದೇಶಗಳಿಗೆ ಉಪಯುಕ್ತ | 1 |
| 15. | ಭಾರತದಲ್ಲಿ ಹಣಕಾಸು ವರ್ಷದ ಅವಧಿ ಯಾವುದು ?<br>***ಉತ್ತರ :***<br>ಏಪ್ರಿಲ್ 1 ರಿಂದ ಮಾರ್ಚ್ 31 | 1 |
| 16. | ಉದ್ಯಮಶೀಲತೆಯು ಒಂದು ಸಾಹಸ ಕಾರ್ಯವಾಗಿದೆ. ಹೇಗೆ ?<br>***ಉತ್ತರ :***<br>— ಬೇರೆಯವರಿಗೆ ಸಾಧ್ಯವಾಗದೇ ಇರುವುದನ್ನು ಸಾಧಿಸುವುದು<br>— ಗೊಂದಲಮಯ, ವಿರೋಧಾತ್ಮಕ, ಅಸ್ತವ್ಯಸ್ತತೆಯಿಂದ ಕೂಡಿರುವ ಸಂದರ್ಭಗಳ ಸದ್ಬಳಕೆ<br>— ಅವಕಾಶಗಳ ಸೃಷ್ಟಿ, ಅನ್ವೇಷಣೆ, ಲಾಭಗಳಿಕೆ | 1 |
| **III.** | **ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು : 8 × 2 = 16** | |
| 17. | ಭಯೋತ್ಪಾದನೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿ.<br>**ಅಥವಾ**<br>ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಭಯೋತ್ಪಾದನೆಗೆ ತೀವ್ರ ವಿರೋಧ<br>— ಕೇಂದ್ರ ಹಾಗೂ ರಾಜ್ಯಸರ್ಕಾರ ತೀವ್ರ ಪ್ರಯತ್ನ<br>— ಜನತೆಯ ಪ್ರಾಣ, ಆಸ್ತಿಪಾಸ್ತಿ ಉಳಿಸಲು ಪ್ರಯತ್ನ<br>— ಭೀತಿವಾದಿಗಳ ನಿಗ್ರಹಕ್ಕೆ ವಿಶೇಷ ಪರಿಣತಿ ಪಡೆದ ಪಡೆಗಳ ರಚನೆ<br>— ರಕ್ಷಣಾ ಪಡೆಗಳಿಂದ ಉಗ್ರಗಾಮಿಗಳ ವಿರುದ್ಧ ಕಾರ್ಯಚರಣೆ<br>— ಶಾಂತಿಪ್ರಿಯ ರಾಷ್ಟ್ರ<br>— ಭಯೋತ್ಪಾದನೆಗೆ ಜಾಗತಿಕ ಮಟ್ಟದಲ್ಲಿ ಖಂಡನೆ<br>(ಯಾವುದಾದರೂ ನಾಲ್ಕು) 4 × ½ | 2 |
| | **ಅಥವಾ**<br>— ಅಮೆರಿಕಾ ಸಂಯುಕ್ತ ಸಂಸ್ಥಾನ<br>— ರಷ್ಯಾ<br>— ಬ್ರಿಟನ್<br>— ಫ್ರಾನ್ಸ್<br>— ಚೈನಾ<br>(ಯಾವುದಾದರೂ ನಾಲ್ಕು) 4 × ½ | 2 |
| 18. | ನಿರುದ್ಯೋಗ ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು ?<br>**ಅಥವಾ**<br>ವರದಕ್ಷಿಣೆಯ ಪಿಡುಗನ್ನು ಕಾನೂನಿನ ಮೂಲಕವಲ್ಲದೇ ಬೇರೆ ಯಾವ ವಿಧಾನಗಳಿಂದ ನಿವಾರಿಸಬಹುದು ?<br>***ಉತ್ತರ :***<br>— ಜನಸಂಖ್ಯಾ ನಿಯಂತ್ರಣ<br>— ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ<br>— ಕೃಷಿ ಕ್ಷೇತ್ರದ ಅಭಿವೃದ್ಧಿ<br>— ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ<br>— ಶೈಕ್ಷಣಿಕ ಸುಧಾರಣಾ ಯೋಜನೆಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಪಂಚವಾರ್ಷಿಕ ಯೋಜನೆಗಳು<br>— ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ<br>— ಗ್ರಾಮೀಣಾಭಿವೃದ್ಧಿ ಯೋಜನೆಗಳು<br>— ಉದ್ಯೋಗ ಖಾತರಿ ಯೋಜನೆ<br>— ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿ ಇತ್ಯಾದಿ....<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| | **ಅಥವಾ**<br>— ಜನ ಜಾಗೃತಿ<br>— ಅಂತರ್ ಜಾತಿ ವಿವಾಹ<br>— ಆಧುನಿಕ ಪ್ರಚಾರ ಮಾಧ್ಯಮಗಳು<br>— ಸ್ವಯಂ ಸೇವಾ ಸಂಘಟನೆಗಳು<br>— ಮಹಿಳಾ ಸಂಘಟನೆಗಳಿಗೆ ಪ್ರೋತ್ಸಾಹ ಇತ್ಯಾದಿ....<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 19. | ಸಹಾಯಕ ಸೈನ್ಯ ಪದ್ಧತಿ ಬ್ರಿಟಿಷರಿಗೆ ತಮ್ಮ ಸಾಮ್ರಾಜ್ಯ ವಿಸ್ತರಿಸಲು ಹೇಗೆ ಸಹಕಾರಿಯಾಯಿತು ?<br>***ಉತ್ತರ :***<br>— ಭಾರತೀಯ ರಾಜರು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು<br>— ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚ ಭರಿಸುವುದು<br>— ನಿರ್ದಿಷ್ಟ ಕಂದಾಯ ಪ್ರದೇಶ ಬಿಟ್ಟುಕೊಡುವುದು<br>— ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟ್‌ನ ನೇಮಕ<br>— ಬ್ರಿಟಿಷರ ಅನುಮತಿ ಇಲ್ಲದೇ ಇತರ ಯುರೋಪಿಯನ್ನರ ನೇಮಕಕ್ಕೆ ನಿರ್ಬಂಧ<br>— ಯುದ್ಧ, ಶಾಂತಿ ಒಪ್ಪಂದ ಮಾಡಿಕೊಳ್ಳಲು ಗವರ್ನರ್ ಜನರಲ್ ಸಮ್ಮತಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯ ಭರವಸೆ<br>— ಹೈದರಾಬಾದ್, ಮೈಸೂರು, ಔಧ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಒಪ್ಪಂದಕ್ಕೊಳಪಟ್ಟವು.<br>(ಯಾವುದಾದರೂ ನಾಲ್ಕು) 4 × ½ | 2 |
| 20. | ಭಾರತವು ಸ್ವಾತಂತ್ರ್ಯ ಗಳಿಸಿದ ನಂತರದಲ್ಲಿ ಎದುರಿಸಿದ ಸಮಸ್ಯೆಗಳಾವವು ?<br>**ಉತ್ತರ :**<br>— ಭಾರತ ವಿಭಜನೆಯ ಪರಿಣಾಮಗಳು<br>— ನಿರಾಶ್ರಿತರ ಸಮಸ್ಯೆ<br>— ಮತೀಯ ಗಲಭೆಗಳು<br>— ಸರ್ಕಾರದ ರಚನೆ<br>— ಸಂಸ್ಥಾನಗಳ ವಿಲೀನೀಕರಣ<br>— ರಾಜ್ಯಗಳ ಪುನರ್‌ವಿಂಗಡಣೆ<br>— ಅನಕ್ಷರತೆ<br>— ಮಹಿಳೆಯರ ಸ್ಥಾನಮಾನ<br>— ಜನಸಂಖ್ಯೆ ಹೆಚ್ಚಳ<br>— ಬಡತನ<br>— ಆರ್ಥಿಕ ಅಸಮಾನತೆ<br>— ಲಾಭಕೋರತನ<br>— ಭ್ರಷ್ಟಾಚಾರ<br>— ಪ್ರಾದೇಶಿಕವಾದ<br>— ಕಳ್ಳಸಾಗಾಣಿಕೆ ಇತ್ಯಾದಿ....<br>(ಯಾವುದಾದರೂ ನಾಲ್ಕು) 4 × ½ | 2 |
| 21. | ಭಾರತದ ವಾಯುಗುಣದ ಮೇಲೆ ಪ್ರಭಾವಬೀರುವ ಅಂಶಗಳಾವವು ?<br>**ಉತ್ತರ :**<br>— ಅಕ್ಷಾಂಶ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಸಮುದ್ರ ಮಟ್ಟದಿಂದ ಇರುವ ಎತ್ತರ<br>— ಸಾಗರಗಳಿಂದ ಇರುವ ದೂರ<br>— ಮಾರುತಗಳ ದಿಕ್ಕು<br>— ಪರ್ವತ ಸರಣಿಗಳು ಹಬ್ಬಿರುವ ರೀತಿ<br>— ಸಾಗರ ಪ್ರವಾಹಗಳು<br>— ಮಾನ್ಸೂನ್ ಮಾರುತಗಳು ಮುಂತಾದವು....<br>(ಯಾವುದಾದರೂ ನಾಲ್ಕು) 4 × ½ | 2 |
| 22. | ಮಣ್ಣಿನ ಸವೆತವು ವ್ಯವಸಾಯದ ಉತ್ಪಾದಕತೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಹೇಗೆ ?<br>***ಉತ್ತರ :***<br>— ನದಿಗಳಲ್ಲಿ ಹೂಳು ತುಂಬಿ ಪ್ರವಾಹ<br>— ನದಿಗಳ ಪಾತ್ರ ಬದಲಾವಣೆ<br>— ಜಲಾಶಯ, ಕೆರೆಗಳಲ್ಲಿ ಹೂಳು ತುಂಬುವಿಕೆ<br>— ಜಲಾಶಯಗಳ ಸಂಗ್ರಹಣಾ ಸಾಮರ್ಥ್ಯ ಇಳಿಕೆ<br>— ನೀರಿನ ಇಂಗುವಿಕೆ ಪ್ರಮಾಣದಲ್ಲಿ ಇಳಿಕೆ<br>— ಸ್ವಾಭಾವಿಕ ಚಿಲುಮೆಗಳ ಬತ್ತುವಿಕೆ<br>— ಭಾರತ ವ್ಯವಸಾಯ ಪ್ರಧಾನ ದೇಶ<br>(ಯಾವುದಾದರೂ ನಾಲ್ಕು) 4 × ½ | 2 |
| 23. | ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ವಿವರಿಸಿ.<br>***ಉತ್ತರ :***<br>— ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು<br>— ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು<br>— ಆರ್ಥಿಕ ಅಸಮಾನತೆಯ ನಿವಾರಣೆ<br>— ಆರ್ಥಿಕ ಸ್ಥಿರತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಅರ್ಥ ವ್ಯವಸ್ಥೆಯ ಆಧುನೀಕರಣ<br>— ಜನಸಂಖ್ಯಾ ನಿಯಂತ್ರಣ<br>— ತಲಾ ಆದಾಯದ ಹೆಚ್ಚಳ ಇತ್ಯಾದಿ....<br>(ಯಾವುದಾದರೂ ನಾಲ್ಕು) 4 × ½ | 2 |
| 24. | ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ಸ್ಥಾಪಿಸಿರುವ ಉದ್ದೇಶಗಳೇನು ?<br>***ಉತ್ತರ :***<br>— ಉದ್ಯಮಿಗಳನ್ನು ಬೆಂಬಲಿಸುವುದು<br>— ಉದ್ಯಮಗಳನ್ನು ಬೆಳೆಸುವುದು<br>— ಉದ್ಯಮಗಳ ಅಭಿವೃದ್ಧಿ<br>— ಉದ್ಯಮಗಳನ್ನು ಆರಂಭಿಸುವುದು<br>— ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಸ್ಥಾಪನೆಗೆ ಹಣಕಾಸು ನೆರವು<br>— ಉದ್ಯಮಿಗಳಿಗೆ ತರಬೇತಿ<br>— ಮಾರುಕಟ್ಟೆ ವ್ಯವಸ್ಥೆ ಇತ್ಯಾದಿ.....<br>(ಯಾವುದಾದರೂ ನಾಲ್ಕು) 4 × ½ | 2 |
| **IV.** | **ಆರು ವಾಕ್ಯಗಳಲ್ಲಿ ಉತ್ತರಿಸುವುದು : 9 × 3 = 27** | |
| 25. | ಚಿಕ್ಕ ದೇವರಾಜ ಒಡೆಯರ್ ಅವರ ಸಾಧನೆಗಳನ್ನು ಪಟ್ಟಿ ಮಾಡಿ.<br>**ಅಥವಾ**<br>ಡಾ. ಆ್ಯನಿಬೆಸೆಂಟ್‌ರವರು ಪ್ರತಿಪಾದಿಸಿದ ಸುಧಾರಣಾ ಕ್ರಮಗಳಾವುವು ?<br>***ಉತ್ತರ :***<br>— ಸಮರ್ಥ ಯೋಧರು ಹಾಗೂ ಆಡಳಿತಗಾರ<br>— ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ ಮತ್ತು ಬಿಜಾಪುರಗಳಲ್ಲಿ ಹಿಮ್ಮೆಟ್ಟಿಸಿದರು.<br>— ಮಾಗಡಿ, ಮಧುಗಿರಿ, ಕೊರಟಗೆರೆ, ಮತ್ತಿತರ ಪ್ರಾಂತ್ಯಗಳ ವಶ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಮೊಘಲರ ಸೇನಾನಿಯಿಂದ ಬೆಂಗಳೂರಿನ ಖರೀದಿ<br>— ಕರ್ನಾಟಕ ಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ ಮತ್ತು ನವಕೋಟಿ ನಾರಾಯಣ ಮುಂತಾದ ಬಿರುದುಗಳು<br>— ಅಠಾರ ಕಛೇರಿ (ಸಚಿವ ಸಂಪುಟ) ನೇಮಕ<br>— ಅಂಚೆ ವ್ಯವಸ್ಥೆಯ ಜಾರಿ<br>— ಚಿಕ್ಕ ದೇವರಾಜ ನಾಲೆ, ದೊಡ್ಡ ದೇವರಾಜ ನಾಲೆಗಳ ನಿರ್ಮಾಣ<br>— ತಿರುಮಲಾರ್ಯ, ಸಂಚಿ ಹೊನ್ನಮ್ಮ ಮುಂತಾದ ಕವಿಗಳಿಗೆ, ಪಂಡಿತರಿಗೆ ಆಶ್ರಯ ಮುಂತಾದವು...<br>(ಯಾವುದಾದರೂ ಆರು) 6 × ½ | 3 |
| | **ಅಥವಾ** | |
| | — ಐರ್ಲೆಂಡ್ ದೇಶದಿಂದ ಆಗಮಿಸಿದರು<br>— ಭಾರತದಲ್ಲಿ ಥಿಯೊಸಾಫಿಕಲ್ ಸೊಸೈಟಿಯ ಚಟುವಟಿಕೆಗಳ ಪ್ರಾರಂಭ<br>— ಉಪನ್ಯಾಸಗಳ ಮೂಲಕ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸಿದರು<br>— ಸಮಾನತೆ, ಸಹೋದರತೆ, ಸಾಮರಸ್ಯಗಳ ವೃದ್ಧಿ<br>— ಸ್ವಾತಂತ್ರ್ಯ ಚಳವಳಿಗೆ ವ್ಯಾಪಕ ಬೆಂಬಲ<br>— ನ್ಯೂ ಇಂಡಿಯಾ ಪತ್ರಿಕೆಯ ಪ್ರಕಟಣೆ<br>— 1916 ರಲ್ಲಿ ಹೋಂ ರೂಲ್ ಚಳವಳಿಯ ಪ್ರಾರಂಭ<br>— 1917 ರ ಕಾಂಗ್ರೆಸ್ ಅಧಿವೇಶನ ಅಧ್ಯಕ್ಷತೆ<br>— ಭಾರತೀಯ ತತ್ವಜ್ಞಾನ ಮತ್ತು ಸ್ವಾತಂತ್ರ್ಯ ಚಳವಳಿಗೆ ಕೊಡುಗೆ<br>(ಯಾವುದಾದರೂ ಆರು) 6 × ½ | 3 |
| 26. | ದೂರಸಂವೇದಿ ತಂತ್ರಜ್ಞಾನದ ಪ್ರಾಮುಖ್ಯತೆಯನ್ನು ವಿವರಿಸಿ. | |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.<br>**ಉತ್ತರ :**<br>— ಚಿತ್ರಗಳ ಮೂಲಕ ನೈಜ ಹಾಗೂ ನಂಬಲರ್ಹ ಮಾಹಿತಿ<br>— ಅತಿ ಶೀಘ್ರ, ಅಲ್ಪಾವಧಿ ಹಾಗೂ ಕಡಿಮೆ ವೆಚ್ಚ<br>— ಸುಲಭ ವಿಶ್ಲೇಷಣೆ<br>— ಹವಾಮಾನ ವೈಪರಿತ್ಯ, ಭೂ ಅಡಚಣೆಗಳನ್ನು ಮೀರಿ ಉಪಗ್ರಹಗಳ ಮೂಲಕ ಕಾರ್ಯನಿರ್ವಹಣೆ<br>— ಪ್ರಕೃತಿ ವಿಕೋಪ ಪರಿಸ್ಥಿತಿಗಳ ಪರಿಣಾಮಕಾರಿ ನಿರ್ವಹಣೆ<br>— ನೈಸರ್ಗಿಕ ಸಂಪನ್ಮೂಲಗಳ ಉಪಯುಕ್ತ ವಿಶ್ಲೇಷಣೆ<br>— ಭೂಬಳಕೆ, ಅರಣ್ಯ ಪ್ರದೇಶ, ಜನವಸತಿ, ಬೆಳೆ ಹಂಚಿಕೆ, ಭೂಸವೆತ, ಜಲರಾಶಿ ಇತ್ಯಾದಿಗಳ ಬಗ್ಗೆ ಮಾಹಿತಿ ಮುಂತಾದವು...<br>(ಯಾವುದಾದರೂ ಆರು) 6 × ½ | 3 |
| | **ಅಥವಾ**<br>— ಕಚ್ಚಾವಸ್ತುಗಳು<br>— ಶಕ್ತಿ ಸಂಪನ್ಮೂಲಗಳು<br>— ಮಾರುಕಟ್ಟೆ<br>— ಸಂಚಾರ ಸೌಲಭ್ಯ<br>— ಕಾರ್ಮಿಕರ ಪೂರೈಕೆ<br>— ಬಂದರುಗಳ ಸೌಲಭ್ಯ<br>— ಕಡಿಮೆ ದರದ ಭೂಮಿ<br>— ತಾಂತ್ರಿಕತೆ<br>— ನೀರಿನ ಲಭ್ಯತೆ<br>— ಸರ್ಕಾರದ ನೀತಿ<br>— ಬಂಡವಾಳ<br>— ಸೂಕ್ತ ವಾಯುಗುಣ ಮುಂತಾದವು....<br>(ಯಾವುದಾದರೂ ಆರು) 6 × ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | ಭಾರತವನ್ನು ಸಬಲೀಕರಣಗೊಳಿಸಲು ಗ್ರಾಮೀಣಾಭಿವೃದ್ಧಿಯು ಅವಶ್ಯಕ. ಏಕೆ ?<br>**ಅಥವಾ**<br>ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಾರ್ವಜನಿಕ ಹಣಕಾಸು ನೀತಿ ಒಂದು ಪ್ರಮುಖ ಸಾಧನವಾಗಿದೆ. ಹೇಗೆ ?<br>***ಉತ್ತರ :***<br>— ಗ್ರಾಮೀಣ ಭಾರತದ ಸಮಸ್ಯೆಗಳ ಸಮರ್ಥ ನಿರ್ವಹಣೆ<br>— ಗ್ರಾಮೀಣ ಜನರಿಗೆ ಶಿಕ್ಷಣ, ತರಬೇತಿ, ಆರೋಗ್ಯ, ನೈರ್ಮಲ್ಯ ಸೌಲಭ್ಯಗಳನ್ನು ನೀಡುವುದು<br>— ಜನರ ಜ್ಞಾನ, ಕೌಶಲ್ಯ ಮತ್ತು ದುಡಿಯುವ ಸಾಮರ್ಥ್ಯಗಳ ಹೆಚ್ಚಳ<br>— ಕೃಷಿಯ ಜೊತೆ ಪಶುಪಾಲನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಕೋಳಿ ಸಾಕಾಣೆಗಳ ಅಭಿವೃದ್ಧಿ<br>— ಕೃಷಿಯನ್ನು ಒಂದು ಲಾಭದಾಯಕ ಉದ್ಯೋಗವನ್ನಾಗಿ ಮಾಡುವುದು<br>— ನಗರಗಳಿಗೆ ವಲಸೆ ತಡೆಗಟ್ಟುವುದು<br>— ವಿದ್ಯುತ್, ನೀರಾವರಿ, ಸಾರಿಗೆ ಸಂಪರ್ಕ, ಮಾರುಕಟ್ಟೆಗಳ ನಿರ್ಮಾಣ<br>— ಗ್ರಾಮೀಣ ಉತ್ಪಾದಕತೆಯ ಹೆಚ್ಚಳ<br>— ಹಳ್ಳಿಗಳಲ್ಲಿ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ<br>— ಉದ್ಯೋಗ, ಆದಾಯಗಳ ಹೆಚ್ಚಳ<br>— ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ<br>— ಬಡ, ಹಿಂದುಳಿದ ವರ್ಗಗಳಿಗೆ ನಿರಂತರ ಉದ್ಯೋಗ<br>— ನಗರ ಪ್ರದೇಶಗಳ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶಗಳಿಗೂ ದೊರೆಯುವಂತೆ ಮಾಡುವುದು ( PURA )<br>— ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಗ್ರಾಮೀಣ ಜನರ ಪಾಲ್ಗೊಳ್ಳುವಿಕೆ<br>(ಯಾವುದಾದರೂ ಆರು) $6 \times \frac{1}{2}$ | 3 |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆ ಸಾಧಿಸಲು ವಿತ್ತೀಯ ನೀತಿ<br>— ಸಾರ್ವಜನಿಕ ಹಣಕಾಸಿನ ನಿರ್ವಹಣೆ<br>— ದೇಶದ ಅಭಿವೃದ್ಧಿಯ ದೃಷ್ಟಿ<br>— ನೈಸರ್ಗಿಕ ಸಂಪತ್ತು, ಶ್ರಮ ಮತ್ತು ಭೌತಿಕ ಬಂಡವಾಳ ಉತ್ಪಾದಕರ ನಡುವೆ ಸಮರ್ಪಕ ಹಂಚಿಕೆ<br>— ಉತ್ಪಾದನೆ ಗರಿಷ್ಠ ಮಟ್ಟಕ್ಕೆ ಹೆಚ್ಚಳ ಆದಾಯದ ಸಮಾನ ಹಂಚಿಕೆ<br>— ಆದಾಯದ ಸಮಾನ ಹಂಚಿಕೆ<br>— ಶಾಂತಿ, ನೆಮ್ಮದಿ<br>— ಪ್ರಜಾಕಲ್ಯಾಣ<br>— ಸಾರ್ವಜನಿಕ ವೆಚ್ಚಗಳ ಹೆಚ್ಚಳ<br>— ಕೃಷಿ, ಸಣ್ಣ ಕೈಗಾರಿಕೆ, ಮೂಲ ಸೌಕರ್ಯ ಕ್ಷೇತ್ರಗಳಿಗೆ ಹೆಚ್ಚಿನ ಬಂಡವಾಳ ಹಂಚಿಕೆ<br>— ಎಲ್ಲಾ ಕ್ಷೇತ್ರಗಳ ಸಮತೋಲನ ಅಭಿವೃದ್ಧಿ<br>— ನಿರುದ್ಯೋಗ, ಬಡತನ ನಿವಾರಣೆ<br>— ಆರ್ಥಿಕ ಏರಿಳಿತ, ಬೆಲೆಗಳ ಏರಿಳಿತಗಳ ಪರಿಣಾಮಕಾರಿ ನಿರ್ವಹಣೆ<br>(ಯಾವುದಾದರೂ ಆರು) $6 \times \frac{1}{2}$ | 3 |
| 28. | ಪ್ರತಿಯೊಬ್ಬರ ಜೀವನದಲ್ಲಿ ಬ್ಯಾಂಕ್ ವ್ಯವಹಾರಗಳು ಅತ್ಯಂತ ಅವಶ್ಯಕವಾಗಿವೆ. ಏಕೆ ? ಸಮರ್ಥಿಸಿ.<br>**ಅಥವಾ**<br>1986 ರ ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕರ ಹಿತರಕ್ಷಣೆಯನ್ನು ಹೇಗೆ ಮಾಡುತ್ತದೆ ?<br>***ಉತ್ತರ :***<br>— ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸಿ ಭದ್ರತೆ ನೀಡುತ್ತದೆ<br>— ಸಾಲ ನೀಡುವುದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಹಣದ ವರ್ಗಾವಣೆ<br>— ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು<br>— ಹುಂಡಿಗಳನ್ನು ಸೋಡಿ ಮಾಡುವುದು<br>— ಭದ್ರತಾ ಕಪಾಟುಗಳು<br>— ವಿದೇಶಿ ವಿನಿಮಯ ನಿರ್ವಹಣೆ<br>— ಸಾಲಪತ್ರ, ಜವಾಬ್ದಾರಿ ಪತ್ರಗಳ ನೀಡಿಕೆ<br>— ಸರ್ಕಾರದ ಹಣಕಾಸಿನ ವ್ಯವಹಾರಗಳ ನಿರ್ವಹಣೆ<br>— ಉಳಿತಾಯಕ್ಕೆ ಬೆಂಬಲ<br>— ಹಣದ ವಸೂಲಿ, ಪಾವತಿ<br>— ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್‌ಗಳು<br>— ಬಡ್ಡಿ ನೀಡಿಕೆ<br>— ಚೆಕ್ ಬುಕ್‌ಗಳ ನೀಡಿಕೆ<br>(ಯಾವುದಾದರೂ ಆರು) $6 \times \frac{1}{2}$ | 3 |
| | **ಅಥವಾ** | |
| | — ಅಪಾಯಕಾರಿ ವಸ್ತುಗಳ ಮಾರಾಟದಿಂದ ರಕ್ಷಣೆ<br>— ಮಾಹಿತಿ ಪಡೆಯುವ ಹಕ್ಕು (ಗುಣಮಟ್ಟ, ಬೆಲೆ, ಪರಿಶುದ್ಧತೆ)<br>— ವಸ್ತುಗಳ ಆಯ್ಕೆಯ ಹಕ್ಕು<br>— ವಸ್ತುಗಳ ಬಗ್ಗೆ ಆಲಿಸುವ ಹಕ್ಕು<br>— ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು<br>— ಗ್ರಾಹಕ ಶಿಕ್ಷಣದ ಹಕ್ಕು<br>— ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು<br>— ಉತ್ತಮ ಆರೋಗ್ಯ ಮತ್ತು ಭೌತಿಕ ಪರಿಸರದ ಹಕ್ಕು<br>— ಜೀವನ ರೀತಿ ನೀತಿಗಳನ್ನು ಉತ್ತಮಪಡಿಸುವ ಹಕ್ಕು<br>(ಯಾವುದಾದರೂ ಆರು) $6 \times \frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 29. | ಡಚ್ಚರ ಅಧಿಕಾರದ ವಿರುದ್ಧ ಮಾರ್ತಾಂಡ ವರ್ಮನು ನಡೆಸಿದ ಹೋರಾಟವನ್ನು ವಿವರಿಸಿ.<br>***ಉತ್ತರ :***<br>— 1729 ರಿಂದ 1758 ರ ವರೆಗೆ ವೈನಾಡ್ ಸಂಸ್ಥಾನದ ಆಳ್ವಿಕೆ<br>— ವೈನಾಡ್ ಸಂಸ್ಥಾನದ ಗಡಿ ವಿಸ್ತರಣೆಗೆ 50 ಸಾವಿರ ಸೈನಿಕರ ಸೈನ್ಯದ ನಿರ್ಮಾಣ<br>— ಕರಿಮೆಣಸು ಬೆಳೆಯುವ ಪ್ರದೇಶಗಳ ವಶ<br>— ಪಾಳೆಗಾರರು, ಸಂಸ್ಥಾನಿಕರನ್ನು ನಿಯಂತ್ರಿಸಿ ಡಚ್ಚರ ವಿರುದ್ಧ ಹೋರಾಡಲು ಪ್ರೇರಣೆ<br>— ಯುದ್ಧದಲ್ಲಿ ಡಚ್ಚರ ಒಕ್ಕೂಟವನ್ನು ಸೋಲಿಸಿ ನೆಡುಮಂಗಡ ಮತ್ತು ಕೊಟ್ಟಾರಕರ ವ್ಯಾಪಾರ ಕೇಂದ್ರಗಳ ವಶ<br>— "ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು" ಎಂದು ಡಚ್ಚರಿಗೆ ಖಾರವಾದ ಪತ್ರ ಬರೆದನು<br>— 1741 ರಲ್ಲಿ ತಿರುವಾಂಕುರಿನ ಮೇಲೆ ಡಚ್ಚರ ದಾಳಿ<br>— ಮಾರ್ತಾಂಡ ವರ್ಮನಿಂದ ಪ್ರತಿ ದಾಳಿ – ಡಚ್ಚರಿಗೆ ಸೋಲು<br>— 24 ಡಚ್ ಅಧಿಕಾರಿಗಳ ಸೆರೆ<br>— ಇಡೀ ದಕ್ಷಿಣ ಭಾರತದಿಂದ ಡಚ್ಚರನ್ನು ಬಿಡಿಸಲು ಯೋಜನೆ<br>— ಕೇರಳ, ತಮಿಳುನಾಡಿನಲ್ಲಿ ಡಚ್ಚರ ವಶವಿದ್ದ ಬಂದರುಗಳ ವಶ<br>— 15 ಆಗಸ್ಟ್ ಒಪ್ಪಂದ–1753<br>— ಮಾರ್ತಾಂಡ ವರ್ಮನಿಗೆ ಡಚ್ಚರಿಂದ ಸಂಪೂರ್ಣ ಅಧಿಕಾರದ ಹಸ್ತಾಂತರ<br>(ಯಾವುದಾದರೂ ಆರು) $6 \times \frac{1}{2}$ | 3 |
| 30. | ಎರಡನೇ ಮಹಾಯುದ್ಧವು ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯಲ್ಲಿ ತಂದ ಬದಲಾವಣೆಗಳಾವುವು ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :***<br>— ಮಾನವನ ಚರಿತ್ರೆಯಲ್ಲಿಯೇ ಅತಿ ಹೆಚ್ಚು ಸಾವು ನೋವು<br>— ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯಲ್ಲಿ ಬದಲಾವಣೆ<br>— ವಿಶ್ವಸಂಸ್ಥೆಯ ಸ್ಥಾಪನೆ<br>— ಅಮೆರಿಕಾ, ರಷ್ಯಾ, ಬ್ರಿಟನ್ ಮತ್ತು ಫ್ರಾನ್ಸ್ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಖಾಯಂ ಸದಸ್ಯ ರಾಷ್ಟ್ರಗಳು<br>— ಅಮೆರಿಕಾ ಮತ್ತು ಸೋವಿಯತ್ ರಷ್ಯಾಗಳು ಪರಸ್ಪರ ವಿರೋಧಿ ಗುಂಪಿನ ನಾಯಕ ದೇಶವಾದವು<br>— ಏಷ್ಯಾ, ಆಫ್ರಿಕಾದ ವಸಾಹತುಗಳಿಗೆ ಸ್ವಾತಂತ್ರ್ಯ<br>— ಬ್ರಿಟನ್, ಫ್ರಾನ್ಸ್‌ಗಳ ವಶದಲ್ಲಿದ್ದ ವಸಾಹತುಗಳಲ್ಲಿ ವಿಮೋಚನಾ ಚಳವಳಿಗಳ ಆರಂಭ<br>— ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹಕ ವಾತಾವರಣ<br>— ಅಮೆರಿಕಾದಿಂದ ಅಣ್ವಸ್ತ್ರ ಪ್ರಯೋಗ<br>— ಅಣ್ವಸ್ತ್ರ ಪೈಪೋಟಿಗೆ ದಾರಿ<br>— ಶೀತಲ ಸಮರಕ್ಕೆ ನಾಂದಿ<br>(ಯಾವುದಾದರೂ ಆರು) $6 \times \frac{1}{2}$ | 3 |
| 31. | ಭಾರತವು ರಷ್ಯಾದೊಂದಿಗೆ ಹೊಂದಿರುವ ಬಾಂಧವ್ಯವನ್ನು ವಿವರಿಸಿ.<br>***ಉತ್ತರ :***<br>— ಹಿಂದಿನ ಸೋವಿಯತ್ ರಷ್ಯಾ ಒಕ್ಕೂಟದ ಕಾಲದಿಂದಲೂ ಉತ್ತಮ ಬಾಂಧವ್ಯ<br>— ಭಾರತ ಅಲಿಪ್ತ ನೀತಿ ಹೊಂದಿದ್ದರೂ ಭಾರತ–ಸೋವಿಯತ್ ನಡುವೆ ರಾಜಕೀಯ, ಆರ್ಥಿಕ ಸಹಕಾರ ಒಪ್ಪಂದ<br>— 1962 ರಲ್ಲಿ ಚೈನಾ ದಾಳಿಯ ಖಂಡನೆ<br>— 1961 ರಲ್ಲಿ ಗೋವಾ ವಿಮೋಚನೆಯ ಸಂದರ್ಭದಲ್ಲಿ ಭಾರತಕ್ಕೆ ಬೆಂಬಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — 1966 ರಲ್ಲಿ ತಾಷ್ಕೆಂಟ್‌ನಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಒಪ್ಪಂದಕ್ಕೆ ಮಧ್ಯಸ್ತಿಕೆ<br>— 1971 ರಲ್ಲಿ 20 ವರ್ಷಗಳ ಸಹಕಾರ ಒಪ್ಪಂದ<br>— ಭಾರತದ ಭಿಲೈ ಹಾಗೂ ಬೋಕಾರೋ ಉಕ್ಕಿನ ಕಾರ್ಖಾನೆಗಳ ನಿರ್ಮಾಣಕ್ಕೆ ನೆರವು<br>— ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ರಷ್ಯಾದಿಂದ ಸಹಕಾರ<br>— ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವಕ್ಕೆ ಬೆಂಬಲ<br>(ಯಾವುದಾದರೂ ಆರು) $6 \times \frac{1}{2}$ | 3 |
| 32. | ಅಸ್ಪೃಶ್ಯತೆಯ ನಿವಾರಣೆಗೆ ಕೈಗೊಳ್ಳಲಾದ ಸಾಂವಿಧಾನಿಕ ಮತ್ತು ಶಾಸನೀಯ ಕ್ರಮಗಳಾವುವು ?<br>***ಉತ್ತರ :***<br>— ಸಂವಿಧಾನದ 17ನೇ ವಿಧಿಯ ಪ್ರಕಾರ ಅಸ್ಪೃಶ್ಯತೆಯ ನಿಷೇಧ<br>— 1955 ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯ ಜಾರಿ<br>— 1976 ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯೆಂದು ಮಾರ್ಪಾಡು<br>— ಈ ಕಾಯ್ದೆಯಂತೆ ಅಸ್ಪೃಶ್ಯತೆಯ ಆಚರಣೆ ಶಿಕ್ಷಾರ್ಹ ಅಪರಾಧ<br>— ಸಾರ್ವತ್ರಿಕ ಮತದಾನ ಹಾಗೂ ಸಮಾನತೆಯ ಹಕ್ಕು<br>— ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿ<br>— 1989 ರ ಶಾಸನದಂತೆ ಅಸ್ಪೃಶ್ಯತೆ ನಿರ್ಮೂಲನೆಗೆ ರಾಜ್ಯ ಸರ್ಕಾರಗಳಿಗೆ ವಿಶೇಷ ಜವಾಬ್ದಾರಿ<br>— ಎಲ್ಲಾ ನಾಗರಿಕರಿಗೆ ಸಮಾನ ಅವಕಾಶ ನೀಡಲು ಪ್ರಯತ್ನ<br>(ಯಾವುದಾದರೂ ಆರು) $6 \times \frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 33. | ನಿನ್ನೆ ರಾತ್ರಿ ಬಂಗಾಳಕೊಲ್ಲಿಯಲ್ಲಿ ತೀವ್ರ ವಾಯುಭಾರ ಕುಸಿತ ಉಂಟಾಗಿದ್ದು ಅದರ ಪರಿಣಾಮಗಳನ್ನು ಎದುರಿಸಲು ತಮಿಳುನಾಡು ಸರ್ಕಾರವು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳೇನು ?<br>***ಉತ್ತರ :***<br>— ಅಪಾಯಕಾರಿ ತಗ್ಗು ಪ್ರದೇಶದಿಂದ ಜನರನ್ನು ಸ್ಥಳಾಂತರ ಮಾಡಿಸುವುದು<br>— ವಿದ್ಯುಜ್ಜನಕ ಯಂತ್ರಗಳು, ದೋಣಿಗಳು, ಹೆಲಿಕಾಪ್ಟರ್ ಮೊದಲಾದವುಗಳನ್ನು ಸಜ್ಜಾಗಿರಿಸುವುದು<br>— ರೈಲು, ಬಸ್ಸು ಮೊದಲಾದ ಮಾರ್ಗಗಳನ್ನು ಚಂಡಮಾರುತ ಪ್ರಭಾವದ ವಲಯದಿಂದ ಬದಲಾಯಿಸುವುದು<br>— ಸಮೂಹ ಮಾಧ್ಯಮಗಳ ಮೂಲಕ ಜನರಿಗೆ ನಿರಂತರ ಮಾಹಿತಿ<br>— ಅಗತ್ಯವಿರುವ ಸೇನಾ ತುಕಡಿಗಳನ್ನು ಸಿದ್ಧಗೊಳಿಸುವುದು<br>— ಸಾಕಷ್ಟು ಸಿಹಿನೀರು, ಆಹಾರ ಹಾಗೂ ಉಡುಪುಗಳನ್ನು ಸಂಗ್ರಹಿಸಿಡುವುದು<br>— ಔಷಧ ಹಾಗೂ ಇತರ ವೈದ್ಯಕೀಯ ನೆರವಿಗೆ ಸಿದ್ಧರಾಗಿರುವುದು ಮುಂತಾದವು....<br>(ಯಾವುದಾದರೂ ಆರು) $6 \times \frac{1}{2}$ | 3 |
| **V.** | ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** **4 × 4 = 16** | |
| 34. | ಪೊಲೀಸ್ ವ್ಯವಸ್ಥೆಯಲ್ಲಿ ಬ್ರಿಟಿಷರ ಕಾಲದಲ್ಲಿ ಜಾರಿಗೆ ತಂದ ಸುಧಾರಣೆಗಳನ್ನು ವಿವರಿಸಿ.<br>**ಅಥವಾ**<br>ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳನ್ನು ವಿವರಿಸಿ.<br>***ಉತ್ತರ :***<br>— ಕಾರ್ನ್‌ವಾಲೀಸ್‌ನಿಂದ ಪ್ರಥಮ ಬಾರಿಗೆ ವ್ಯವಸ್ಥಿತ ಪೊಲೀಸ್ ವಿಭಾಗ ಅಸ್ತಿತ್ವಕ್ಕೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ( SP ) ಎನ್ನುವ ಹೊಸ ಹುದ್ದೆ ಸೃಷ್ಟಿ<br>— 1793 ರಲ್ಲಿ ಪ್ರತಿ ಜಿಲ್ಲೆಯನ್ನು ಠಾಣೆ ಮತ್ತು ಹಳ್ಳಿಗಳಾಗಿ ವಿಭಜನೆ<br>— ಠಾಣೆ ಮತ್ತು ಹಳ್ಳಿಗಳಲ್ಲಿ ಅಪರಾಧಗಳ ನಿಯಂತ್ರಣಕ್ಕೆ ಕೊತ್ವಾಲ ಹಾಗೂ ಚೌಕಿದಾರರ ನೇಮಕ<br>— 1770 ರ ದಶಕದ ಭೀಕರ ಕ್ಷಾಮದ ಕಾಲದಲ್ಲಿ ಇಡೀ ಪೊಲೀಸ್ ವ್ಯವಸ್ಥೆಯ ನಿಯಂತ್ರಣಕ್ಕೆ ಬ್ರಿಟಿಷ್ ಅಧಿಕಾರಿಗಳ ನೇಮಕ<br>— 1781 ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳ ನೇಮಕ ಪದ್ಧತಿ ಜಾರಿ<br>— ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೆ<br>— 1861 ರಲ್ಲಿ 'ಪೊಲೀಸ್ ಕಾಯ್ದೆ' ಯ ಜಾರಿ<br>— 1902 ರಲ್ಲಿ ಪೊಲೀಸ್ ಕಮಿಷನ್ ಕಾಯ್ದೆಯ ಜಾರಿ<br>— ವಿದ್ಯಾರ್ಹತೆ ಹೊಂದಿದ ಭಾರತೀಯರಿಗೆ ಅಧಿಕಾರಿ ಹುದ್ದೆ ಹೊಂದಲು ಅವಕಾಶ (ಯಾವುದಾದರೂ ಎಂಟು) 8 × ½ | 4 |
| | **ಅಥವಾ** | |
| | — ಇಡೀ ಭಾರತವನ್ನು ವ್ಯಾಪಿಸಿರಲಿಲ್ಲ<br>— ದೇಶದ ಬಿಡುಗಡೆಗಿಂತ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗೆ ಹೋರಾಟ<br>— ಯೋಜಿತ ದಂಗೆಯಾಗಿರಲಿಲ್ಲ<br>— ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು<br>— ಬ್ರಿಟಿಷ್ ಸೈನಿಕರಲ್ಲಿನ ಒಗ್ಗಟ್ಟು<br>— ಭಾರತೀಯ ಸೈನಿಕರಲ್ಲಿದ್ದ ಭಿನ್ನತೆ<br>— ಸೂಕ್ತ ಮಾರ್ಗದರ್ಶನ ಮತ್ತು ಶಿಸ್ತಿನ ಕೊರತೆ<br>— ವ್ಯವಸ್ಥಿತ ಸಂಘಟನೆಯ ಕೊರತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಯುದ್ಧತಂತ್ರ ಸೈನಿಕ ಪರಿಣತಿ, ಸೂಕ್ತ ಸೇನಾ ನಾಯಕತ್ವಗಳ ಕೊರತೆ<br>— ನಿಶ್ಚಿತ ಗುರಿ ಹೊಂದಿರಲಿಲ್ಲ<br>— ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ<br>— ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡರು<br>(ಯಾವುದಾದರೂ ಎಂಟು) $8 \times \frac{1}{2}$ | 4 |
| 35. | ಬಾಲಗಂಗಾಧರ ತಿಲಕರು ಭಾರತೀಯರಲ್ಲಿ ರಾಷ್ಟ್ರೀಯ ಹೋರಾಟವನ್ನು ಪ್ರೇರೇಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದರು. ದೃಢೀಕರಿಸಿ.<br>***ಉತ್ತರ :***<br>— ಪ್ರಮುಖ ತೀವ್ರವಾದಿ ನಾಯಕರು<br>— 1905 ರ ಬಂಗಾಳದ ವಿಭಜನೆಯ ಖಂಡನೆ<br>— ಸ್ವದೇಶಿ ಚಳವಳಿಗೆ ಕರೆ<br>— 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ಪಡೆದೇ ತೀರುವೆ' ಎಂದು ಘೋಷಣೆ<br>— ಪೂರ್ಣ ಸ್ವರಾಜ್ಯ ಹೊಂದುವ ಗುರಿ<br>— ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸಲು ಪ್ರಯತ್ನ<br>— ಧಾರ್ಮಿಕ ಆಚರಣೆಗಳ ಮೂಲಕ ಜನರ ಸಂಘಟನೆ<br>— ಕೇಸರಿ ಮತ್ತು ಮರಾಠ ಪತ್ರಿಕೆಗಳ ಪ್ರಾರಂಭ<br>— ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಸೇರಲು ಪ್ರೇರಣೆ<br>— ಕ್ರಾಂತಿಕಾರಿ ಲೇಖನಗಳ ಮೂಲಕ ಜನರಲ್ಲಿ ಸ್ಫೂರ್ತಿ<br>— ಬ್ರಿಟಿಷ್ ಸರ್ಕಾರದಿಂದ ತಿಲಕರ ಬಂಧನ<br>— ಸೆರೆಮನೆಯಲ್ಲಿದ್ದಾಗ 'ಗೀತಾ ರಹಸ್ಯ' ರಚನೆ<br>(ಯಾವುದಾದರೂ ಎಂಟು) $8 \times \frac{1}{2}$ | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸ್ಥಾನಮಾನಗಳಲ್ಲಿ ಸಾಕಷ್ಟು ಸುಧಾರಣೆಗಳಾಗುತ್ತಿವೆ. ಸಮರ್ಥಿಸಿ.<br>***ಉತ್ತರ :***<br>— ವೈದ್ಯಕೀಯ, ಆಧ್ಯಾಪಕ, ಇಂಜಿನಿಯರ್, ಫೈಲಟ್ ಗಗನಯಾತ್ರಿ, ಪೊಲೀಸ್, ರಾಜಕೀಯ, ರಕ್ಷಣಾ ಪಡೆ ಮುಂತಾದ ಕ್ಷೇತ್ರಗಳಲ್ಲಿ ಪಾತ್ರ<br>— ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾಗಿ, ಪ್ರತಿಭಾ ಪಾಟೀಲ್ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಣೆ<br>— ಸರೋಜಿನಿ ನಾಯ್ಡು ರಾಜ್ಯಪಾಲರಾಗಿ, ಸುಚೇತ ಕೃಪಾಲಾನಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಣೆ<br>— ಇನ್ನೂ ಹಲವಾರು ಮಹಿಳೆಯರು ರಾಜ್ಯಪಾಲರು ಮುಖ್ಯಮಂತ್ರಿಗಳು, ವಿದೇಶಿ ರಾಯಭಾರಿಯಾಗಿ ಸೇವೆ<br>— ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಾರಂಭ<br>— ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ಸ್ಥಾನಮಾನಗಳ ಸುಧಾರಣೆಗೆ ಯೋಜನೆ<br>— ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ ಬಾಲ್ಯವಿವಾಹ ನಿಷೇಧ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆಗಳ ಜಾರಿ<br>— ಸ್ತ್ರೀಶಕ್ತಿ ಕಾರ್ಯಕ್ರಮ ಮೂಲಕ ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನ<br>— ಸ್ವ-ಉದ್ಯೋಗಕ್ಕಾಗಿ ಸಾಲ ಮತ್ತು ಸಬ್ಸಿಡಿ ನೀಡಿಕೆ<br>— ಮಹಿಳಾ ಮಂಡಲ, ಯುವತಿ ಮಂಡಲ ಸ್ತ್ರೀಶಕ್ತಿ ಸಂಘಗಳ ಮೂಲಕ ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ<br>— ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಮಹಿಳಾ ಆಯೋಗಗಳ ರಚನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ. 33 ರಷ್ಟು ಮೀಸಲಾತಿ | |
| | — ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿ | |
| | — ಶಾಸಕಾಂಗ ಮತ್ತು ಸಂಸತ್ತಿನಲ್ಲಿ ಮಹಿಳಾ ಮೀಸಲಾತಿಗೆ ಪ್ರಯತ್ನ | |
| | (ಯಾವುದಾದರೂ ಎಂಟು) 8 × ½ | 4 |
| 37. | ಅರಣ್ಯ ಸಂರಕ್ಷಣೆ ಹೇಗೆ ಕೈಗೊಳ್ಳಬಹುದು ? | |
| | ***ಉತ್ತರ :*** | |
| | — ಕಾಡ್ಗಿಚ್ಚು ಉಂಟು ಮಾಡುವ ಮರಗಳನ್ನು ತೆಗೆಯುವುದು | |
| | — ಅರಣ್ಯದ ಮರಗಳಿಗೆ ತಗಲುವ ರೋಗಗಳ ನಿಯಂತ್ರಣ | |
| | — ಸಸಿಗಳನ್ನು ನೆಡುವುದು | |
| | — ಬೀಜಗಳನ್ನು ಹರಡುವುದು | |
| | — ಕಾನೂನು ಬಾಹಿರ ಮರಕಡಿಯುವಿಕೆ ನಿಯಂತ್ರಣ | |
| | — ಕಾಡುಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆ ನಿಯಂತ್ರಣ | |
| | — ಸಾರ್ವಜನಿಕರು ಗಿಡ ನೆಡಲು ಪ್ರೋತ್ಸಾಹ | |
| | — ಅರಣ್ಯದ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡುವುದು | |
| | — ಅರಣ್ಯ ರಕ್ಷಣೆಗೆ ಪ್ರೇರಣೆ | |
| | — ಸಾಮಾಜಿಕ ಅರಣ್ಯ ಯೋಜನೆಯ ತ್ವರಿತ, ಪರಿಣಾಮಕಾರಿ ಜಾರಿ ಇತ್ಯಾದಿ.... | |
| | (ಯಾವುದಾದರೂ ಎಂಟು) 8 × ½ | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **VI.** 38. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5** | |


a) ಕರ್ಕಾಟಕ ಸಂಕ್ರಾಂತಿ ವೃತ್ತ

b) ಹಿರಾಕುಡ್ ಯೋಜನೆ

c) ಭಾರತದ ಹೆಬ್ಬಾಗಿಲು

d) ಕೋಲಾರ

***ಉತ್ತರ :***



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:*** <br> ***(ಪ್ರಶ್ನೆ ಸಂಖ್ಯೆ 38 ರ ಬದಲಿಗೆ)*** <br> ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. <br> — ನೀರಾವರಿ ಸೌಲಭ್ಯ <br> — ಜಲವಿದ್ಯುಚ್ಛಕ್ತಿ ಉತ್ಪಾದನೆ <br> — ಪ್ರವಾಹಗಳ ನಿಯಂತ್ರಣ <br> — ನೌಕಾಯಾನ <br> — ಗೃಹ ಬಳಕೆಗೆ ನೀರು <br> — ಕೈಗಾರಿಕೆಗೆ ನೀರು <br> — ಮಣ್ಣಿನ ಸವಕಳಿ ನಿಯಂತ್ರಣ <br> — ಒಳನಾಡಿನ ನೌಕಾಯಾನ <br> — ಮೀನುಗಾರಿಕೆ ವೃದ್ಧಿ <br> — ಅರಣ್ಯ ಸಂಪತ್ತು ವೃದ್ಧಿ <br> — ಮನರಂಜನೆ $10 \times \frac{1}{2}$ | 5 |